ಕಿರಿಯರು ಹತ್ತಿರ ಸೇರಿಸಲಿಲ್ಲ. ಭಾರತಕ್ಕೆ ಬಂದು ನಾನು ತಪ್ಪು ಮಾಡಿದೆ ಎಂದು ಮೊದಲ ಬಾರಿಗೆ ಅನಿಸಿತು. ಹೇಗೋ ಮಾಡಿ ರಾಮೇಶ್ವರಕ್ಕೆ ಹೋಗಿ ಒಂದು ಮೀನುಗಾರಿಕಾ ಹಡಗನ್ನು ಹತ್ತಿ – "ತಮಿಳ್ ಈಳಂ ನಾಯಕ ವೇಲುಪಿಳ್ಳೈ ಪ್ರಭಾಕರನ್‌ರನ್ನು ಭೇಟಿಯಾಗಲು ಹೊರಟಿದ್ದೇನೆ" ಅಂದೆ. ಆ ಹಡಗಿನಲ್ಲಿ ನನ್ನಂತೆ ಕಳ್ಳತನದಿಂದ ಶ್ರೀಲಂಕಾಕ್ಕೆ ಹೋಗುವ ಏಳು ಮಂದಿ ಇದ್ದರು. "ಅರ್ಧ ಸಮುದ್ರ ದಾಟಿಸುವುದು ನಮ್ಮ ಜವಾಬ್ದಾರಿ. ಆಚೆ ಕಡೆಯಿಂದ ಹಡಗು ಬಾರದಿದ್ದರೆ, ಎರಡೂ ಕಡೆ ಪೊಲೀಸು ದಾಳಿ ಮಾಡಿದರೆ ನಾವೇನನ್ನೂ ಮಾಡುವಂತಿಲ್ಲ. ಎಲ್ಲಾ ನಿಮ್ಮ ನಸೀಬನ್ನು ಅವಲಂಬಿಸಿದೆ" ಎಂದು ಬೋಟಿನ ಯಜಮಾನ ಹೇಳಿದ. ನನಗದು ಗೊತ್ತಿತ್ತು. ನಮ್ಮ ಹಡಗು ರಾಮೇಶ್ವರದಿಂದ ಹೊರಟಿತು. ಎಲ್ಲೂ ಸಮಸ್ಯೆ ಎದುರಾಗಲಿಲ್ಲ."

"ಅಂದರೆ, ನೀವು ಮತ್ತೆ ಲಂಕೆಗೆ ಹೋದಿರಿ."

"ಹೌದು. ನಮ್ಮ ಮನೆ ಇದ್ದದ್ದು ಜಾಫ್ನಾಕ್ಕೆ ಹತ್ತಿರದಲ್ಲಿ. ನನ್ನಲ್ಲಿ ಭಾರತೀಯ ಕರೆನ್ಸಿ ಇತ್ತು. ಅದನ್ನು ಚೇಂಜ್ ಮಾಡಿಕೊಂಡೆ. ಜಾಫ್ನಾ ತುಂಬಾ ಬದಲಾಗಿತ್ತು. ಭೀಕರ ಭೂಕಂಪಕ್ಕೆ ಸಿಕ್ಕ ನಗರದಂತಾಗಿತ್ತು. ಅಲ್ಲಲ್ಲಿ ಛಿದ್ರಗೊಂಡ ಕಟ್ಟಡಗಳು ಮತ್ತು ಮನೆಗಳು. ನಾನು ಹಳೆಯ ಮನೆ ಇದ್ದಲ್ಲಿಗೆ ಹೋಗಿ ನೋಡಿದರೆ ದೊಡ್ಡ ಮಣ್ಣಿನ ರಾಶಿ! ಅದರ ಮೇಲೆ ಲಂಕನ್ ಏರ್‌ಫೋರ್ಸ್ ವಿಮಾನದಲ್ಲಿ ಹಾರಿ ಬಂದು ಹಾಕಿದ ಬಾಂಬಿಗೆ ಇಡೀ ಮನೆಯೊಂದಿಗೆ ಕುಟುಂಬವೇ ಸರ್ವನಾಶವಾಗಿ ಹೋಗಿತ್ತು. ಆಗ ನಿಶ್ಚಯಿಸಿದೆ: ಇದುವರೆಗೆ ನನ್ನ ಬಾಳಿಗೊಂದು ಉದ್ದೇಶ ಇರಲಿಲ್ಲ. ಇನ್ನಾದರೂ ಇರಬೇಕೆಂದು. ತಮಿಳು ಈಳಂ ಪಡೆಯನ್ನು ಸೇರಿ ಪ್ರತೀಕಾರ ಎಸಗಬೇಕೆಂದು. ಅದಕ್ಕೆ ಸುಪ್ರೀಂ ಕಮಾಂಡರ್‌ನನ್ನು ಕಾಣಬೇಕೆಂದು."

"ಸುಪ್ರೀಂ ಕಮಾಂಡರ್ ಅಂದರೆ ವೇಲುಪಿಳ್ಳೈ?..."

"ಹೌದು, ಸರಿಯಾಗಿ ಊಹಿಸಿದಿರಿ. ವೇಲುಪಿಳ್ಳೈ ಪ್ರಭಾಕರನ್. ಜಾಫ್ನಾದ ನಿಬಿಡಾರಣ್ಯದ ಯಾವುದೋ ಗುಪ್ತ ಗುಹೆಯಲ್ಲಿ ಅವರ ವಾಸ. ನಾನು ಮೊದಲು ಲೋಕಲ್ ಕಮಾಂಡರನ್ನು ಕಂಡೆ. 'ಅರ್ಥವಿಲ್ಲದ ಜೀವನಕ್ಕೊಂದು ಗುರಿ ಕಲ್ಪಿಸಿಕೊಡಿ' ಎಂದು ಎಲ್ಲಾ ವಿವರ ಬಿಚ್ಚಿಟ್ಟೆ. ಅವನು ವೇಲುಪಿಳ್ಳೈಯವರಲ್ಲಿಗೆ ನನ್ನನ್ನು ಕರೆದೊಯ್ಯುವುದಾಗಿ ಹೇಳಿದ."

ನಾನು ಆಶ್ಚರ್ಯದಿಂದ ಕೇಳಿದೆ:

"ನೀವು ವೇಲುಪಿಳ್ಳೈಯವರನ್ನು ಭೇಟಿಯಾದ್ರಾ?"

"ಹೌದು ಸ್ವಾಮಿ. ಅವರು ನನ್ನ ಪಾಲಿಗೆ ದೊಡ್ಡ ಹೀರೊ. ಆಗಲೂ, ಈಗಲೂ. ಕಣ್ಣಿಗೆ ಬಟ್ಟೆ ಕಟ್ಟಿ ದಟ್ಟ ಕಾಡಲ್ಲಿ ಎರಡು ದಿವಸ ನಡೆದ ಮೇಲೆ ಆ ಗುಹೆ ಸಿಕ್ಕಿತು. ನನ್ನ ಆರಾಧ್ಯ ಮೂರ್ತಿಯನ್ನು ಕಂಡಾಗ ಗೌರವ ಮೂಡಿ ಕಾಲಿಗೆ ಬಿದ್ದುಬಿಟ್ಟೆ. ವೇಲುಪಿಳ್ಳೈ ನಕ್ಕರು.

''ನೀವು ನನಗಿಂತ ಪ್ರಾಯದಲ್ಲಿ ದೊಡ್ಡವರು. ಚಿಕ್ಕವರ ಕಾಲು ಹಿಡಿಯುವುದು ತಪ್ಪು'' ಎಂದರು.

''ನೀವು ಸಾಧನೆಯಲ್ಲಿ ದೊಡ್ಡವರು. ಲಂಕಾದ ತಮಿಳರ ಬಾಳಿಗೊಂದು ದಿಕ್ಕುದೆಸೆ ತೋರಿಸಿ ಕೊಟ್ಟವರು. ನೀವೆಲ್ಲಿ, ನಾನೆಲ್ಲಿ'' ಎಂದೆ. ಅಷ್ಟು ಮಾತಾಡಿದಾಗ ಗಂಟಲು ಕಟ್ಟಿ ಗದ್ಗದಿತನಾದೆ.

"ಹ್ಞುಂ, ಮುಂದೇನಾಯಿತಜ್ಜಾ?"

"ಅವರು ಗಂಭೀರ ಸ್ವರದಲ್ಲಿ, 'ನೀವು ನನ್ನನ್ನು ಭೇಟಿಯಾದುದೇಕೆ?'' ಎಂದು ಕೇಳಿದರು.

''ನಾನು ಸ್ವತಂತ್ರ ಈಳಂಗಾಗಿ ನನ್ನವರೆಲ್ಲರನ್ನು ಕಳಕೊಂಡೆ. ನನಗೀಗ ನಿಲ್ಲಲೊಂದು ಮನೆಯೂ ಇಲ್ಲ.''

''ನಿಮಗೆ ಬೇಕಾಗಿರುವುದೇನು? ಹೊಸ ಮನೆಯೇ? ಅಥವಾ ಪ್ರತೀಕಾರವೇ? ಹೊಸ ಮನೆ ಎಂದಾದರೆ ತಂಬಿ ದೊರೈಯನ್ನು ಭೇಟಿಯಾಗಿ.''